ಒ ಎಸ್ 2/2024 ಪಿ.ಡಬ್ಲ್ಯೂ:1

ಇಂದು ದಿಃ 11.12.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 1 ರಿಂದ 4 ಪ್ರತಿವಾದಿ ಪರ ಶ್ರೀ ವಕೀಲರಿಂದಃ

ನನ್ನ ಆಸ್ತಿಯು ದುರಸ್ತು ಪ್ರಕ್ರಿಯೆ ಯಲ್ಲಿ ಇದೆ. ಜಮೀನಿನ ಸ್ವಾಧೀನ ನನ್ನ ಬಳಿ ಇದೆ. ಪ್ರತಿವಾದಿ 5 ರಿಂದ 20 ರವರು ಜಮೀನಿನ ಪೂರ್ವ ಮಾಲೀಕರು. 2010ರಲ್ಲಿ ನಾನು ಜಮೀನನ್ನು ಖರೀದಿಸಿದ್ದರು ನಾನು ದುರಸ್ತಿ ಮಾಡಲು ಆಗುವುದಿಲ್ಲ ಎಂದು ತಹಸೀಲ್ದಾರ್ ಕಛೇರಿಯಲ್ಲಿ ಹೇಳಿದ್ದರು. ಆದೇಶದ ವಿರುದ್ಧ ನಾನು ಉಪವಿಭಾಗಧಿಕಾರಿಗಳು ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ್ದೆ ಆದರೆ ನಾನು ಸಂಬಂದಪಟ್ಟ ದಾಖಲೆಗಳನ್ನು ಹಾಜರಾಗದೇ ಇರುವ ಕಾರಣ ಖಾತೆ ಮಾಡಲು ಆಗುವುದಿಲ್ಲ ಎಂದು ಅಲ್ಲಿಯ ಸಹ ಆದೇಶವಾಗಿತ್ತು. ನಂತರ ನಾನು ಆ ದೇಶದ ವಿರುದ್ದ ಜಿಲ್ಲಾಧಿಕಾರಿಗಳ ನ್ಯಾಯಾಲಯಕ್ಕೆ ಮೇಲ್ಮನವಿ ಮಾಡಿಲ್ಲ. ದಾವಾ ಆಸ್ತಿ ಖಾತೆ ಆಗದ ಕಾರಣ ತಹಸೀಲ್ದಾರ್ ಮತ್ತು ಇತರರನ್ನು ನಾನು 1 ರಿಂದ 4ನೇ ಪ್ರತಿವಾದಿ ಎಂದು ತೋರಿಸಿದ್ದೆ. ಖಾತೆ ಮಾಡುವ ಅಧಿಕಾರ ಕಂದಾಯ ನ್ಯಾಯಾಲಯಕ್ಕೆ ಇದೆಯೇ ಹೊರತು ಆ ಅಧಿಕಾರವು ಸಿವಿಲ್ ನ್ಯಾಯಲಯಕ್ಕೆ ಇಲ್ಲದ ಕಾರಣ ನನ್ನ ದಾವೆ ಊರ್ಜಿತ ಆಗುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.